ಎದೆಯನ್ನು ನಡುಗಿಸುತ್ತ ಪವನ್‌ನ ಬುಲೆಟ್ ರಸ್ತೆಯ ಗೇಟಿನ ಬಳಿ ಬಂದು ನಿಂತಾಗ ಶೀಲಾಳಿಗೆ ಯಾವತ್ತೂ ಎಲ್ಲಿಲ್ಲದ ಸಂತಸ. ಅಂದಿನ ದಿನ ಶೀಲಾಳ ಮನೆಯೆದುರು ಮೂರು ಕಾರುಗಳು ನಿಂತಿದ್ದದ್ದು ಕಂಡಾಗಲೇ ಪವನ್‌ಗೆ ಗೊತ್ತಾಗಿತ್ತು, ತಾನು ಬಂದ ಸಮಯ ಸರಿಯಿಲ್ಲವೆಂದು.

ಮನೆಗೆ ಅತಿಥಿಗಳು ಬರುವರೆಂಬ ಸುದ್ದಿ ಶೀಲಾ ತಿಳಿಸಿರಲಿಲ್ಲ. ಬಂದ ದಾರಿಗೆ ಸುಂಕವಿಲ್ಲದಂತೆ ಪವನ್ ಮರಳಿದಾಗ ಶೀಲಾಳ ಮನಸ್ಸಿನಲ್ಲಿ ತಳಮಳ ಉಂಟಾದ್ದೇನೋ ನಿಜ. ಆತನಿಗೆ ಫೋನ್ ಮೂಲಕ ತಿಳಿಸುವುದಕ್ಕೂ ಅವಕಾಶ ಆಗಿರಲಿಲ್ಲ. ಮತ್ತೆ ಭೇಟಿಗೆ ಬಾರದಿರಲಾರನೆಂಬುದು ಗೊತ್ತಿದ್ದರೂ ಆ ದಿನ ಬಂದ ಅತಿಥಿಯ ಮೇಲೆ ಶೀಲಾಳಿಗೆ ಏನೋ ಒಂಥರಾ ಅಸಹನೆ ಉಂಟಾಗಿತ್ತು. ಪ್ರೊ. ಭಾಸ್ಕರ್ ಶೀಲಾಳ ಮೊಸರಿನ ಕಲ್ಲಾಗಿ ಬಿಟ್ಟಿದ್ದರು. ಶೀಲಾಳಿಗೆ ಪವನ್ ಎಂದರೆ ಅದೇನೋ ಅಭಿಮಾನ. ತಾನು ಆರಾಧಿಸುವ ಹೀರೋ ಆತ. ಆತನ ನಯ ವಿನಯಗಳಿಗಿಂತ ಹೆಚ್ಚಾಗಿ ಥವಗುಟ್ಟುವ ಸದ್ದಿನೊಂದಿಗೆ ಬಂದು ನಿಲ್ಲುವ ಬುಲೆಟ್ ಬೈಕ್. ತನ್ನ ಕಾರು ಅದರ ಮುಂದೆ ಏನೂ ಅಲ್ಲ ಎಂಬ ಭಾವ. ಅದರ ಬೆನ್ನೇರಿ ಪವನ್‌ಗೆ ಆತು ಕುಳಿತುಕೊಳ್ಳುವುದೇ ರೋಮಾಂಚಕ ಅನುಭವ. ಚಂದ್ರಪ್ಪನವರು ಇಲ್ಲದ ವೇಳೆಯಲ್ಲಿ ಮೇಲಿಂದ ಮೇಲೆ ಆತನ ಬುಲೆಟ್ ಬೈಕ್ ನವದುರ್ಗಾ ಎಸ್ಟೇಟಿನ ಗೇಟಿನ ಬಳಿ ಬುಸುಗುಟ್ಟುತ್ತಿರುತ್ತದೆ. ಜಾನಮ್ಮನ ಹೊರತಾಗಿ ಮಿಕ್ಕವರ ಕಣ್ಣು ತಪ್ಪಿಸಿ ಗುಡ್ಡದ ಮೇಲಿನ ದೇವಸ್ಥಾನಕ್ಕೆ ಶೀಲಾಳೊಂದಿಗೆ ಬುಲೆಟ್ ಬೈಕೂ ಏರಿ ಬರುತ್ತದೆ. ಪವನ್‌ಗೆ ಚಂದ್ರಪ್ಪನವರ ತಿಜೋರಿಯ ಮೇಲೆ ಮೋಹ. ಹೇಗಾದರೂ ಮಾಡಿ ಅದನ್ನು ಲಪಟಾಯಿಸಬೇಕೆಂದು ಆತ ಹೊಂಚುಹಾಕುತ್ತಿದ್ದ. ಚಿನ್ನವೇ ಬೇಕಾಗಿದ್ದ ಅವನಿಗೆ ಹೆಣ್ಣೊಂದು ನೆಪ. ಅದು ಹೆಣ್ಣಿನ ಮೂಲಕ ನೆರವೇರುವುದಾದರೆ ಇನ್ನೂ ಸಂತೋಷ. ಪ್ರತಿ ಬಾರಿಯೂ ಗುಡ್ಡದಪ್ಪನ ಗುಡಿಗೆ ಹೊರಟಾಗ ಶೀಲಾಳ ಅಲಂಕಾರ ವಿಭಿನ್ನವಾಗಿರುತ್ತಿತ್ತು. ಒಂದೊಂದು ದಿನ ಒಂದೊಂದು ಬಗೆಯ ಆಭರಣ! ಪವನ್ ಈ ಥರದ ಬದಲಾವಣೆ, ಹೊಸತನಗಳನ್ನು ಬಹಳವಾಗಿ ಮೆಚ್ಚಿಕೊಳ್ಳುತ್ತಿದ್ದ.

'ದೇವಸ್ಥಾನಕ್ಕೆ ಬರುವಾಗ್ಲೂ ಯಾಕೆ ಇಷ್ಟೊಂದು ಆಭರಣ ಹಾಕ್ಕೊಳ್ತೀಯಾ?'

'ದೇವರಿಗೆ ಮೆಚ್ಚುಗೆ ಆಗ್ಲೀಂತ' ಶೀಲಾ ಮುಸಿ ಮುಸಿ ನಕ್ಕು ಉತ್ತರಿಸಿದಳು.

'ಅಂದ್ರೆ?'

'ಅಂದ್ರೆ, ಗುಡ್ಡದಪ್ಪನಿಗೆ!' ಶೀಲಾಳ ಮಾತಿನ ಧ್ವನಿಯನ್ನು ಅರಿತರೂ ಅರಿಯದವನಂತೆ ಪವನ್ ಅವಳ ಕಣ್ಣುಗಳನ್ನೇ ನೋಡಿದ. ಅದಕ್ಕೆ ಸಮಜಾಯಿಷಿ ಕೊಡುವವಳಂತೆ 'ರಾಶಿ ಬಿದ್ದಿದೆಯಲ್ಲ. ಇಷ್ಟಾದರೂ ಹಾಕಿಕೊಳ್ಳದಿದ್ದರೆ ಹೇಗೆ?' ಎಂದಳು.

'ನಮ್ಮಲ್ಲೂ ಅಷ್ಟೆ, ಅಮ್ಮನಿಗಂತೂ ಚಿನ್ನದಲ್ಲಿ ಆಸಕ್ತಿನೇ ಇಲ್ಲ. ಯಾರಾದರೂ ಹಾಕಿಕೊಳ್ಳೋರು ಬರ್ಲೀಂತ ಯಾವಾಗಲೂ ಅನ್ತಿರ್ತಾಳೆ.'

'ಯಾರನ್ನಾದ್ರೂ ಮಾಡ್ಕೊಳ್ಳಿ.'

'ಯಾರ್‍ಯಾರನ್ನು ಯಾಕೆ ಮಾಡ್ಕೊಳ್ಳಿ' ಎನ್ನುತ್ತಾ ಆಕೆಯ ಬೆನ್ನಿಗೆ ಜೋತು ಬೀಳುತ್ತಾನೆ. ಆಕೆ ಕೊಸರಿಕೊಂಡು, 'ಈ ಗಂಡಸರೇ ಹಾಗೆ. ಅವಸರವಾದಿಗಳು. ಯಾವುದಕ್ಕೂ ಕಾಲ ಕೂಡಿ ಬರಬೇಕು' ಎನ್ನುತ್ತಾಳೆ.

'ಕಾಲ ಕೂಡಿ ಬರುವುದಲ್ಲ, ಕೂಡಿಸಿ ಬರುವುದು. ನಾವು ಸುಮ್ಮನೆ ಕೂತರೆ ಕಾಲ ಅದಾಗಿಯೇ ಕೂಡುವುದೇ?' ಪವನ್ ತನ್ನ ಅಪ್ಪುಗೆಯನ್ನು ಬಿಗಿಗೊಳಿಸುತ್ತಾನೆ. ತನ್ನನ್ನು ಸುಲಭದಲ್ಲಿ ಬಿಡಲಾರನೆಂದು ಶೀಲಾ ಮನಸಾರೆ ಭಯಪಡುತ್ತಾಳೆ. ಆದರೆ ಬುಲೆಟಿನ ಥವಥವ ಶಬ್ದ ಆಕೆಯನ್ನು ರೋಮಾಂಚನದ ಪರಾಕಾಷ್ಠೆಗೆ ಒಯ್ಯುತ್ತಲೇ ಇರುತ್ತದೆ. ಪವನನ ಬೆನ್ನ ಹಿಂದೆ ಶೀಲಾ ಅವಳಿಗೂ ನಿಲುಕದಷ್ಟು ಎತ್ತರಕ್ಕೆ ಏರುತ್ತಾಳೆ!

4

ಮೂಲತಃ ಚಿಕ್ಕಮಗಳೂರಿನವರಾದ ಡಾ. ಗಣೇಶ್‌ಗೆ ಚಂದ್ರಪ್ಪನವರು ವೀರನಗರದಲ್ಲೇ ಕ್ಲಿನಿಕ್ಕನ್ನೂ ತೆರೆದುಕೊಟ್ಟಿದ್ದರು. ಡಾ. ಗಣೇಶ್‌ರ ಮನೆಯಲ್ಲಿ ಏನೂ ಇಲ್ಲವೆಂದಲ್ಲ. ಎಲ್ಲವೂ ಇದೆಯಾದರೂ ಗಣೇಶ ತನ್ನ ಕಣ್ಣೆದುರಲ್ಲೇ ಇರಲಿ ಎಂಬುದು ಚಂದ್ರಪ್ಪನವರ ಆಗ್ರಹ. ಅದಕ್ಕೆಂದೇ ಆತ ಬೇರೇನಾದರೂ ಯೋಚನೆ ಮಾಡುವ ಮುನ್ನವೇ ವೀರನಗರದಲ್ಲೊಂದು ಕ್ಲಿನಿಕ್ಕನ್ನು ಕಟ್ಟಿಸಿಟ್ಟು ಅವರನ್ನು ಬಂಧಿಸಿಟ್ಟದ್ದು. ಚಂದ್ರಪ್ಪನವರೂ ಡಾ. ಗಣೇಶ್‌ರ ತಂದೆಯವರೂ ಒಂದೇ ತಾಯಿಯ ಮಕ್ಕಳಂತೆ ಬೆಳೆದವರು. ಅನಿರೀಕ್ಷಿತ ಸೋಂಕು ರೋಗವೊಂದು ಗಣೇಶ್‌ರ ಹೆತ್ತವರನ್ನು ಬಲಿ ತೆಗೆದುದು ಗಣೇಶ್, ಚಂದ್ರಪ್ಪನವರನ್ನು ಸೇರಿಕೊಳ್ಳುವುದಕ್ಕೆ ಪ್ರಬಲ ಕಾರಣವಾಯಿತು. ಎಳವೆಯಿಂದಲೇ ತನ್ನ ಕಣ್ಣ ಮುಂದೆ ಬೆಳೆದ ಗಣೇಶ್ ಬಗ್ಗೆ ಚಂದ್ರಪ್ಪನವರಿಗೆ ಎಲ್ಲಿಲ್ಲದ ವಾತ್ಸಲ್ಯ. ಗಂಡು ಮಕ್ಕಳಿಲ್ಲದ ಕಾರಣ ಅವರು ಗಣೇಶರನ್ನು 'ತನ್ನ ಮಗನ ಸಮಾನ' ಎಂದುಕೊಳ್ಳುತ್ತಿದ್ದರು. ಎಂ.ಬಿ.ಬಿ.ಎಸ್.ಗಾಗಿ ಮೈಸೂರಿಗೆ ತೆರಳಿದ್ದ ಗಣೇಶ್, ಡಾಕ್ಟರ್ ಆಗಿ ಹಿಂದಿರುಗಿದಾಗ ವೀರನಗರದಲ್ಲಿ ಕ್ಲಿನಿಕ್ ಸಿದ್ಧವಾಗಿತ್ತು. ಆ ಪೇಟೆಗೆ ಎಂ.ಬಿ.ಬಿ.ಎಸ್. ಸಾಕು ಎಂಬುದು ಚಂದ್ರಪ್ಪನವರ ಅಭಿಪ್ರಾಯ. ಅದಷ್ಟೇ ಅಲ್ಲ; ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ಪರದೇಶಕ್ಕೆ ಹೋದರೆ ಮತ್ತೆ ಆತ ತನ್ನ ಕೈಗೆ ಸಿಗಲಾರನೆಂಬ ಅಭಿಪ್ರಾಯವೂ ಅವರದಾಗಿತ್ತು. ಹಾಗಾಗಿ ಅವರೇ ವಿಶೇಷ ಮುತುವರ್ಜಿ ವಹಿಸಿ ಕ್ಲಿನಿಕ್ಕಿನ ವ್ಯವಸ್ಥೆ ಮಾಡಿದ್ದರು.

ಇನ್ನು ಡಾ. ಗಣೇಶರಿಗೊಂದು ಮದುವೆಯನ್ನೂ ಮಾಡಿಸಿ, ಕ್ಲಿನಿಕ್ಕಿನ ಪಕ್ಕದಲ್ಲೇ ಎಲ್ಲಾದರೂ ಒಂದು ಮನೆಯನ್ನೂ ಖರೀದಿಸಿ, ಚಿಕ್ಕಮಗಳೂರಿನ ಅವರ ಎಸ್ಟೇಟನ್ನು ಮಾರಿಸಿ ಬಿಟ್ಟರೆ ಮುಂದೆ ಗಣೇಶ್ ತನ್ನ ಹತ್ತಿರದಲ್ಲೇ ಇರುತ್ತಾನೆ ಎಂಬುದು ಚಂದ್ರಪ್ಪನವರ ಮನದಿಚ್ಛೆ. ಅದಾಗಲೇ ಆತನ ಮದುವೆಯ ಬಗ್ಗೆ ಗುಸುಗುಸು ಕೇಳಿ ಬರತೊಡಗಿತ್ತು. ಶೀಲಾಳ ಹೆಸರು ಚಲಾವಣೆಗೆ ಬಂದ ಬಗ್ಗೆ ಚಂದ್ರಪ್ಪನವರಿಗೆ ಸುದ್ದಿಯೂ ಬಂದಿತ್ತು. ತಾನಿದ್ದಾಗ ಒಂದು ರೀತಿ, ತಾನಿಲ್ಲದಿದ್ದಾಗ ಒಂದು ರೀತಿ ವ್ಯವಹರಿಸುವುದನ್ನು ಕಂಡುಹಿಡಿದ ಚಂದ್ರಪ್ಪನವರಿಗೆ ಅದು ನುಂಗಲಾರದ ತುತ್ತಾಗಿತ್ತು. ಮಗನಂತೆ ಬೆಳೆಸಿದ ಹುಡುಗನಿಗೆ ತನ್ನ ಮಗಳನ್ನು ಕೊಟ್ಟು ಮದುವೆ ಮಾಡುವುದು ಆಗದ ಹೋಗದ ಮಾತು. ಆತನ ಬೆಳವಣಿಗೆಯಲ್ಲಿ ತನ್ನ ಪಾಲೂ ಇದೆ ಎಂದ ಮಾತ್ರಕ್ಕೆ ಆತನಿಗೆ ತಾನು ಹೆಣ್ಣು ಕೊಡುವ ದೂರಾಲೋಚನೆಯುಳ್ಳವ ಎಂದು ಮಂದಿ ಆಡಿಕೊಳ್ಳುವುದೂ ಅವರಿಗೆ ಬೇಕಾಗಿರಲಿಲ್ಲ. ಎಳೆಯ ಮಗುವನ್ನು ಕೈಯಲ್ಲೆತ್ತಿ ಬೆಳೆಸಿದ್ದು, ಮಗನ ಹಾಗೆ; ಅಳಿಯನ ಹಾಗಲ್ಲ.

ಚಂದ್ರಪ್ಪನವರು ಈ ಸುದ್ದಿಯನ್ನು ಬುಡದಿಂದ ಚಿವುಟಿ ತೆಗೆಯುವ ತೀರ್ಮಾನ ಮಾಡಿದರು. ಅದೊಂದು ದಿನ ಚಂದ್ರಪ್ಪನವರ ತಲೆ ಕೆಟ್ಟುಹೋಗಿತ್ತು. ಶೀಲಾಳನ್ನು ತನಗೆ ಕೊಟ್ಟು ಮದುವೆ ಮಾಡಿಸಿರೆಂದು ಕೇಳುವ ತೀರ್ಮಾನಕ್ಕೆ ಡಾ. ಗಣೇಶ್ ಬಂದಿರುವ ಸುದ್ದಿ ಅನಿರೀಕ್ಷಿತವಾಗಿ ಅಲ್ಲದಿದ್ದರೂ ಅವರ ಕಿವಿಗೆ ಬಂದು ಅಪ್ಪಳಿಸಿತ್ತು. ಇನ್ನು ತಡಮಾಡುವುದು ಸರಿಯಲ್ಲವೆಂದು ತಾವೇ ಡಾ. ಗಣೇಶರ ಕ್ಲಿನಿಕ್‌ಗೆ ನೇರವಾಗಿ ಹೋಗಿ, ಒಳಗೆ ಯಾರೂ ಇಲ್ಲವೆಂದು ಖಾತ್ರಿಪಡಿಸಿಕೊಂಡು, ಚೇಂಬರಿಗೆ ನುಗ್ಗಿದರು. ಡಾ. ಗಣೇಶ್ ಕುಳಿತಲ್ಲಿಂದ ದಿಗ್ಗನೆದ್ದು ಚಂದ್ರಪ್ಪನವರನ್ನು ಕುಳಿತುಕೊಳ್ಳುವಂತೆ ವಿನಂತಿಸಿ ಬಳಿಕ ತಾನು ಕುಳಿತುಕೊಂಡ. ಯಾಕೋ ಅಂಕಲ್ ಮುಖ ಎಂದಿನಂತಿಲ್ಲ ಎಂದು ಯೋಚಿಸುತ್ತಿರಬೇಕಾದರೆ ಚಂದ್ರಪ್ಪನವರೇ ಮಾತು ತೆಗೆದರು. 'ನೋಡು ಗಣೇಶಾ, ಶೀಲಾ ನಿನ್ನ ತಂಗಿ, ಚಿಕ್ಕಂದಿನಿಂದ ನೀವಿಬ್ಬರೂ ಅಣ್ಣ ತಂಗಿಯರಂತೆಯೇ ಬೆಳೆದವರು. ನಿನ್ನನ್ನು ಮಗನಾಗಿ ಒಪ್ಪಿದ ಮೇಲೆ ಅಳಿಯನ ಪಟ್ಟ ಕೊಡೋದಕ್ಕೆ ನನ್ನಿಂದಾಗದು. ನನ್ನ ಕುಟುಂಬಕ್ಕೆ ಒಬ್ಬ ಸೊಸೆಯೂ ಒಬ್ಬ ಅಳಿಯನೂ ಹೊರಗಿನಿಂದ ಬಂದು ಸೇರಬೇಕು. ಒಂದು ಜನ್ಮಕ್ಕೆ ತಿಂದು ಮುಗಿಯದಷ್ಟು ಸೊತ್ತು ನನ್ನ ಬಳಿ ಇದೆ. ಅದಕ್ಕೆ ಎಷ್ಟು ಜನರಿದ್ದರೂ ಕಡಿಮೆಯೆ. ಅಂಥದ್ದರಲ್ಲಿ ನೀನು ಆ ನನ್ನ ಆಸೆಯನ್ನು ಮೊಟಕುಗೊಳಿಸಬೇಡ. ಹಾಗೇನಾದರೂ ನಿನ್ನ ಮನಸ್ಸಿನಲ್ಲಿದ್ದರೆ ಈ ಕ್ಷಣದಲ್ಲಿ ಅದನ್ನು ಬಿಟ್ಟು ಬಿಡು. ನೀನೂ ನನ್ನ ಮಗನೆ' ಎಂದರು.

ಒಂದು ಕ್ಷಣ ಡಾ. ಗಣೇಶರ ನಾಲಗೆಯಲ್ಲಿ ಶಬ್ದವಿಲ್ಲದೆ ಹೋಯಿತು. ಶೀಲಾ ಹಾಗೂ ತನ್ನ ನಡುವೆ ಅಣ್ಣ ತಂಗಿಯರ ಸ್ನೇಹವಷ್ಟೇ ಇದ್ದುದೆಂದು ಶೀಲಾ ಕೂಡ ನಂಬಿದಂತಿತ್ತು. ಅತಿಯಾದ ಸಲಿಗೆಯಿಂದ ತನ್ನೊಂದಿಗೆ ಮಾತಿಗೆ ಮಾತು ಸೇರಿಸುತ್ತ ಕಣ್ಣೆದುರು ಚಿಗರೆಯಂತೆ ಕುಣಿಯುತ್ತಲಿದ್ದಾಗಲೂ ಆಕೆ ತನ್ನ ಬಗ್ಗೆ ಯಾವ ಮೋಹವನ್ನೂ ಇಟ್ಟಿರಲಿಲ್ಲವೆ? ತಾನು ಮಾತ್ರ ಆಕೆಯನ್ನು ಬಯಸಿದ್ದೆ? ಇಷ್ಟು ಕಾಲ ತನ್ನ ಬಯಕೆಯನ್ನು ಒಳಗೆಯೇ ಬಚ್ಚಿಟ್ಟು ಸಮಯ ಸಂದರ್ಭ ಕೂಡಿಬರಲೆಂದು ಪೆದ್ದನಂತೆ ಕಾದದ್ದು ನಾನು ಮಾಡಿದ ತಪ್ಪು. ದೊಪ್ಪನೆ ತನ್ನ ಮೇಲೆರಗಿದ ಆಘಾತವನ್ನು ನುಂಗಲಾರದಿದ್ದರೂ ಸಾವರಿಸಿಕೊಂಡು, 'ಶೀಲಾಳನ್ನು ಕೇಳಿದಿರಾ?' ಎಂದರು.

(ಸಶೇಷ)